

ಈಶ್ವರ

ಎನ್ನುವುದು ನನಗೂ ಗೊತ್ತಿತ್ತು.

ಒಮ್ಮೆ ನನ್ನಮ್ಮನಿಗೆ ಹುಷಾರಿಲ್ಲ ಎಂದು ಊರಿಗೆ ಹೋಗಿದ್ದಾಗ ಜೀವನ್ ಮನೆಗೂ ಸಹ ಹೋಗಿದ್ದೆ. ಅವನ ಅಪ್ಪ ಅಮ್ಮ ನೀನಾದರೂ ಬುದ್ಧಿ ಹೇಳು. ಒಂದಲ್ಲಾ ಒಂದು ಕಾರಣಕ್ಕೆ ಬಂದ ಸಂಬಂಧಗಳನ್ನೆಲ್ಲಾ ಬೇಡ ಎನ್ನುತ್ತಾನೆ. ನಮಗೂ ವಯಸ್ಸಾಗಿದೆ, ಅವನಿಗೂ ಮದುವೆಯ ವಯಸ್ಸು ಮೀರುತ್ತಾ ಬಂದಿದೆ. ಮೊಮ್ಮಕ್ಕಳನ್ನು ಆಡಿಸಿ ಕಣ್ಣು ಮುಚ್ಚಿಕೊಳ್ಳುತ್ತೇವೆ ಎಂದಾಗ, ಅಯ್ಯೋ ದೇವರೇ ನಾನೆಂತಹಾ ತಪ್ಪು ಮಾಡುತ್ತಿದ್ದೇನೆ. ಅನ್ಯಾಯವಾಗಿ ಈ ಮುದಿ ಜೀವಗಳ ಪೀಕಲಾಟಕ್ಕೆ ದೂಡಿದ್ದೇನೆ ಎಂದು ಕರುಳು ಕಿತ್ತು ಬಂತು. ಅವರನ್ನು ಸಮಾಧಾನ ಪಡಿಸಿ ಬೆಂಗಳೂರಿಗೆ ಹೊರಟೆ.

ಅಲ್ಲಿಂದ ಬಂದ ಮೇಲೆ ಅದ್ಯಾಕೋ ಜೀವನ್ ಅಪ್ಪ ಅಮ್ಮನ ಮುಖ ಪದೇ ಪದೇ ನನ್ನನ್ನು ಕಾಡತೊಡಗಿತು. ನಾನು ತಪ್ಪು ಮಾಡುತ್ತಿದ್ದೇನೆ ಎನ್ನುವ ಅರಿವು ಮನಸಿನ ಮೂಲೆಯಲ್ಲಿ ಹೆಮ್ಮರವಾಗ ತೊಡಗಿತು. ಕೊನೆಗೊಂದು ದಿನ ನಿರ್ಧರಿಸಿ ಬಿಟ್ಟೆ.... !

ಕ್ರಮೇಣವಾಗಿ ನಾನಾಗಿಯೇ ಅವನಿಂದ ದೂರವಾಗುತ್ತಾ ಬಂದೆ. ನನ್ನನ್ನು ಅಷ್ಟೊಂದು ಹಚ್ಚಿಕೊಂಡಿದ್ದ ಜೀವನ್ ಗೋಳಾಡಿದ, ಅತ್ತು ತಬ್ಬಿಕೊಂಡ, ಕೋಪಗೊಂಡು ಕೈ ಮಾಡಿದ, ಹೀಗೆಯೇ ಸಾಯುವವರೆಗೂ ಇದ್ದು ಬಿಡೋಣ ಎಂದು ಅಂಗಲಾಚಿದ. ಆದರೆ ನನ್ನ ನಿರ್ಧಾರ ಮಾತ್ರ ಬದಲಾಗಲಿಲ್ಲ. ಅವನಿಗೆ ಅರ್ಥವಾಗುವಂತೆ ತಿಳಿ ಹೇಳಿದೆ. ಆರಂಭದಲ್ಲಿ ಈ ವಿಷಯದ ಬಗ್ಗೆ ಇನ್ನೆಂದೂ ನನ್ನ ಹತ್ತಿರ ಮಾತನಾಡಲು ಬರಲೇಬೇಡ ಎಂದಿದ್ದ. ನಿಧಾನವಾಗಿ ವಸ್ತುಸ್ಥಿತಿಯ ಬಗ್ಗೆ ಅವನಿಗೂ ಅರ್ಥವಾಗತೊಡಗಿತ್ತು. ಕೊನೆಗೊಮ್ಮೆ ಮನೆಯಲ್ಲಿ ನೋಡಿದ ಹುಡುಗಿಯ ಮದುವೆಯಾಗುವುದಾಗಿ ಮಾತುಕೊಟ್ಟ.

ಕೂಡಿಟ್ಟಿದ್ದ ಐವತ್ತು ಸಾವಿರ ರೂಪಾಯಿಗಳನ್ನು ಅವನ ಮದುವೆಗೆ ಉಡುಗೊರೆ ಎಂದು ನೀಡಿ ಅಂದೇ ನಾವಿದ್ದ ಮನೆಯ ತೊರೆದುಬಿಟ್ಟೆ. ಮದುವೆಗೆ ಕರೆದ ಆಪ್ತ ನೆಂಟರಂತೆ ಎಲ್ಲಾ ಕೆಲಸಗಳನ್ನೂ ಮಾಡಿ ಓಡಾಡಿ ನಲಿದೆ. ನನ್ನ ಮನಸ್ಸಿನೊಳಗಿನ ದುಗುಡವ ಮಾತ್ರ ಯಾರಿಗೂ ಕಾಣದಂತೆ ಎಚ್ಚರವಹಿಸಿದೆ. ಅದು ಅನಿವಾರ್ಯ ಕೂಡ. ಅಲ್ಲಿ ಎಲ್ಲರೂ ನಿನ್ನದ್ಯಾವಾಗ ಮದುವೆ ಎಂದು ಕೇಳಿದ ಪ್ರಶ್ನೆಗೆ ಅಳಬೇಕೋ ನಗಬೇಕೋ ಎನ್ನುವ ಗೊಂದಲ, ನೋವು ನನ್ನ ಕಾಡಿತ್ತು.

ಮದುವೆ ಮುಗಿಸಿಕೊಂಡು ಮತ್ತೆ ಬೆಂಗಳೂರಿಗೆ ಬಂದ ಮೇಲೆ ಸಿಮ್ ಕಾರ್ಡ್ ಬದಲಿಸಿದೆ. ಕೆಲಸ, ಮನೆ, ಮೇಲ್ ಐಡಿ, ಅವನಿಗೆ ನನ್ನ ಸುಳಿವು ನೀಡುವ ಯಾವ ಕುರುಹನೂ ಬಿಡದೆ ಎಲ್ಲವನೂ ಬದಲಿಸಿದೆ. ಅವನ ನೋಡಬೇಕು, ಮಾತನಾಡಿಸಬೇಕು ಎಂದು ಎಷ್ಟೋ ಬಾರಿ ಮನಸ್ಸು ತುಡಿಯುತ್ತಿತ್ತು. ಅದರ ಮಾತಿಗೆ ಓಗೊಡದೆ ಹೃದಯದ ಬಾಗಿಲನು ಮುಚ್ಚಿ ಬಂಡೆಯ ಎಳೆದೆ. ಮತ್ತೆ ಮತ್ತೆ ನೆನಪುಗಳು ಕಾಡುತ್ತಲಿದ್ದವು. ಅವನ ತೋಳುಗಳ ಆಸರೆಯ ಹೃದಯ ಬಯಸುತ್ತಲಿತ್ತು. ಒಂಟಿತನ ಕುಕ್ಕಿ ಕುಕ್ಕಿ ತಿನ್ನುತ್ತಲಿತ್ತು. ಆದರೆ ನನ್ನಿಂದ ಒಂದು ಹೆಣ್ಣಿನ ಜೀವನ ಹಾಳಾಗಬಾರದು ಎಂದು ಮನಸ್ಸಿಗೆ ತಿದ್ದಿ ತಿಳಿಹೇಳಿದೆ. ಅರ್ಥವಾಯಿತೋ ಇಲ್ಲವೋ ಎನ್ನುವ ಗೊಡವೆಗೂ ಹೋಗದೆ ಜೀವನ ಸಾಗಿಸತೊಡಗಿದೆ.

ಅವನ ನೆನಪುಗಳು ನನಗೆ ನಾಳೆಗೆ ಬದುಕಲು ಬೆಳಕಾಗಿವೆ. ತನು ಮನ ಎರಡು ಅವನೇ ನನ್ನ ಗಂಡ ಎಂದು ಒಪ್ಪಿಕೊಂಡಿವೆ. ಅವನನ್ನು ನೋಡಬೇಕೆನಿಸಿದ ಕ್ಷಣ ಅವನ ಹೆಂಡತಿಯ ಮುಖ ಪ್ರತ್ಯಕ್ಷವಾಗಿ ಬದುಕಿನ ನಿಜರೂಪ ಗಹಗಹಿಸಿ ನಗುತ್ತದೆ. ಮನಸ್ಸು ಸಾಕು ಈ ಜನ್ಮಕೆ ಇಷ್ಟು ಸಾಕು ನಿನ್ನ ಪಾಡಿಗೆ ನೀನು ಇದ್ದು ಬಿಡು ಎಂದು ಮೂಲೆ ಸೇರುತ್ತದೆ. ಮನಸಿನ ಮಾತಿಗೆ ಪ್ರತೀ ಬಾರಿ ಸೋಲುತ್ತೇನೆ. ನೆನಪುಗಳ ಜೊತೆ ಸತ್ತು ಸತ್ತು ಬದುಕುತ್ತೇನೆ. ದೇವರ ದಯೆ ಇದ್ದರೆ ನಾಳೆಗಳಲಿ ಅವನೇ ನನ್ನ ಕಣ್ಣೆದುರಿಗೆ ಬರುವನು ಎನ್ನುವ ನಂಬಿಕೆ ನಾನಿರುವವರೆಗೂ ಇರುತ್ತದೆ ಎನ್ನುವುದು ಮಾತ್ರ ನನ್ನ ಕನಸುಗಳೊಳಗಿನ ಕನಸು .

ಸಮಾಜ ನಮ್ಮ ಸಂಬಂಧವನ್ನು ಒಪ್ಪುತ್ತಿರಲಿಲ್ಲ. ಇಲ್ಲಿ ಬಾಳಬೇಕಾದರೆ ಅದರ ರೀತಿ ನೀತಿಗಳಿಗೆ ಬದ್ಧರಾಗಿ ಇರಬೇಕಾದುದು ಅನಿವಾರ್ಯ. ಅದನ್ನೇ ನಾನೂ ಕೂಡ ಮಾಡಿದ್ದು. ಅದಕ್ಕಾಗಿಯೇ ಈ ನಿರ್ಧಾರ. ಮಿಡಿಯುವ ಮನಸ್ಸಿಗೆ ಚೂರಿ ಚುಚ್ಚಿ ಸುಮ್ಮನಾಗಿಸುವ ಪ್ರಯತ್ನ.

* * *

ಕೆಲಸಕ್ಕೆ ಹೋಗುವ ಜಾಗಗಳಲ್ಲೂ ಅದೇನೋ ಗುಸುಗುಸು, ಅವಮಾನ, ವ್ಯಂಗ್ಯಭರಿತ ನೋಟ ಎದುರಿಸಿ ಸಾಕಾಗಿ ಹೋಗಿತ್ತು. ಅದಕ್ಕಾಗಿಯೇ ನಿರಂತರ ಕೆಲಸ ಬದಲಿಸುತ್ತಿದ್ದೆ. ಒಂದು ದಿನ ಗಟ್ಟಿ ನಿರ್ಧಾರ ಮಾಡಿ ನನ್ನಂತವರು ಮಾಡುವ ಕೆಲಸಕ್ಕೆ ಕೈಹಾಕಿದ್ದೇನೆ. ಇನ್ನೆಷ್ಟು ದಿನ ನನ್ನೊಳಗನು ಹುದುಗಿಸಿ ನನ್ನದಲ್ಲದ ವ್ಯಕ್ತಿತ್ವದಲಿ ಬದುಕುವುದು. ಇರುವುದೊಂದೇ ಜನ್ಮ. ನಾನು ನಾನಾಗಿರುವುದೇ ನನ್ನೊಳಗಿಗೆ ಖುಷಿ. ಅದಕ್ಕೇ ಈಗ ದಿನಾ ಬೆಂಗಳೂರಿನ ಒಂದೊಂದು ಬಡಾವಣೆಗೆ ಹೋಗುತ್ತೇನೆ. ಕೈತುಂಬಾ ಅಲ್ಲದಿದ್ದರೂ ಜೀವನಕ್ಕೆ ಸಾಕಾಗುವಷ್ಟು ಹಣ ಸಿಗುತ್ತದೆ. ನೆಮ್ಮದಿಯ ಮಾತ್ರ ಮನಸ್ಸು ಬಿಡದೆ ಪ್ರತಿಕ್ಷಣ ಹುಡುಕುತ್ತದೆ.

ನಾನು ಹೀಗೆ ಎಂದು ತಿಳಿದ ಮೇಲೆ ಅಪ್ಪ ಅಮ್ಮ ನನ್ನಿಂದ ಹಣವನ್ನು ತೆಗೆದು ಕೊಳ್ಳುವುದ ನಿಲ್ಲಿಸಿದ್ದಾರೆ. ಊರಲ್ಲಿ ಮಾನ ಉಳಿಸಿಕೊಳ್ಳಲು ನನ್ನನ್ನು ಕೆಲಸ ಕ್ಕಾಗಿ ಇಲ್ಲದ ವಿದೇಶಕ್ಕೆ ಕಳುಹಿಸಿಬಿಟ್ಟಿದ್ದಾರೆ. ಪಾಪ ಅವರಾದರೂ ಇನ್ನೇನು ಮಾಡಲು ಸಾಧ್ಯ ?

ಯಾರಿಗಾಗಿ ನಾನು ಇನ್ನೂ ಇರಬೇಕೆನ್ನುವ ಪ್ರಶ್ನೆಗಳಿಗೆ ಅವನ ನೆನಪುಗಳು, ಅಲ್ಲಿ ಅರಳಿದ ಮತ್ತಷ್ಟು ಕನಸುಗಳು, ನಾಳೆಗಳಲಿ ಒಮ್ಮೆ ಸಿಕ್ಕರೆ ಅವನ ಹೆಗಲ ಮೇಲೆ ತಲೆ ಇಟ್ಟು ಕಣ್ಣೀರಾಗಿ ನಿನ್ನೆಗಳ ಕಹಿಯ ಮರೆತು ಮತ್ತಷ್ಟು ದಿನ ಬದುಕ ಬೇಕೆನ್ನುವ ಆಸೆ ದಿನಾ ಬೀದಿ ಬೀದಿ ಅಲೆಯುವಾಗ ಅವನಿಗಾಗಿ ಹುಡುಕುವ ಕಣ್ಣುಗಳಲಿ, ಅದರೊಳಗೆ ಇರುವುದು ಕೇವಲ ಕಾಯುವಿಕೆಯ ಬಿಸಿ ನೀರು ಮತ್ತು ನಿಟ್ಟುಸಿರು.

ರಾತ್ರಿ ಕಪ್ಪಡರುತ್ತಿದ್ದಂತೆ ಕನಸುಗಳ ಮೆರವಣಿಗೆಯಲಿ ದಿನಾ ಅವನ ದರ್ಶನ ವಿಲ್ಲದೆ ನಿದಿರಾದೇವಿ ನನ್ನನ್ನು ಕರೆದೊಯ್ಯುವುದೇ ಇಲ್ಲ. ಅದೆಷ್ಟೇ ನೋವುಗಳು ಎದೆಯಲಿ ತುಂಬಿ ತುಳುಕುತ್ತಿದ್ದರೂ, ಹೆತ್ತವರಿಗೆ ಬೇಡವಾಗಿದ್ದರೂ, ಸಮಾಜ ಹೀಯಾಳಿಸಿ ಮೂಗು ಮುರಿದರೂ.... ಕತ್ತಲವ್ವ ಮಾತ್ರ ದಿನಾ ರಂಗುರಂಗಿನ ಕನಸುಗಳ ತುಂಬಿ ಕೊಡುತ್ತಾಳೆ. ನನ್ನೆಲ್ಲಾ ನೋವನು ಕೇಳಿ ಜೋಗುಳವ ಹಾಡುತ್ತಾಳೆ. ನನ್ನಲ್ಲಿನ ಅವನಲ್ಲದ ಅವಳಿಗೆ ಸಾಂತ್ವನ ಹೇಳುತ್ತಾಳೆ. ಮತ್ತೆ ಬೆಳಿಗ್ಗೆ ಎದ್ದ ಕೂಡಲೆ ನನ್ನ ಕಥೆ ಎಂದಿನಂತೆ ಮುಂದುವರೆಯುತ್ತಲೇ ಸಾಗುತ್ತದೆ ನಾಳೆಗಳೆಡೆಗೆ.... ಇಳೆಗೆ ಶಶಿಯ ಬೆಳದಿಂಗಳು ತಬ್ಬಿ ಜೋಗುಳವ ಹಾಡುವಾಗ ಅವನ ನೆನಪಿನ ಕನಸುಗಳು ಕಣ್ಣ ಪರದೆಯ ಮುಂದೆ ಹರಿಯುವವರೆಗೂ....!